<u>ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಪಟ್ಟಣ.</u>

**<u>ಸಿ.ಸಿ. ಸಂಖ್ಯೆ: 339/2024</u>**

ಫಿರ್ಯಾಧಿದಾರರು : ಅಬಕಾರಿ ಪೊಲೀಸರು

-- ವಿರುದ್ಧ--

ಆರೋಪಿತರು : ಭಾಗ್ಯಮ್ಮ ಉರುಫ್ ಗೌರಮ್ಮ,
ಕೋಂ ಪುಟ್ಟಸ್ವಾಮಿಗೌ,
49 ವರ್ಷ, ಮಾಕಳಿ ಗ್ರಾಮ,
ಮಳೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

<u>ದೋಷಾರೋಪಣೆ</u>

ಶ್ರೀ ವೆಂಕಟೇಶಪ್ಪ ವಿ., ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಪಟ್ಟಣ.

ದಿನಾಂಕ 29.08.2023 ರಂದು ಸಂಜೆ 6.45 ಗಂಟೆಯ ಸಮಯದಲ್ಲಿ ಅಬಕಾರಿ ಉಪ ಆಯುಕ್ತರು, ರಾಮನಗರ ಜಿಲ್ಲೆ ಇವರ ಮಾರ್ಗದರ್ಶನ ಹಾಗೂ ಅಬಕಾರಿ ಉಪ ಅಧೀಕ್ಷಕರು, ರಾಮನಗರ ಉಪ ವಿಭಾಗ, ರಾಮನಗರ ಹಾಗೂ ಅಬಕಾರಿ ನಿರೀಕ್ಷಕರು, ಚನ್ನಪಟ್ಟಣ ವಲಯ ಇವರ ನಿರ್ದೇಶನದಲ್ಲಿ ಅಬಕಾರಿ ಉಪ ನಿರೀಕ್ಷಕರು - 2 ರವರು ವಲಯ ಸಿಬ್ಬಂದಿಯೊಂದಿಗೆ ಚನ್ನಪಟ್ಟಣ ತಾಲ್ಲೂಕು ಮಾಕಳಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಬಂದ ಖಚಿತ ಮಾಹಿತಿ ಮೇರೆಗೆ ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಮಾಕಳಿ ಗ್ರಾಮದಲ್ಲಿನ ಭಾಗ್ಯಮ್ಮ ಉರುಫ್ ಗೌರಮ್ಮ ಕೋಂ ಪುಟ್ಟಸ್ವಾಮಿಗೌಡ ಎಂಬುವವರು ತಮ್ಮ ಮನೆಯಲ್ಲಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿಯ ಮೇರೆಗೆ ಸಂಜೆ 7.00 ಗಂಟೆ ಸಮಯದಲ್ಲಿ ಪಂಚರುಗಳೊಂದಿಗೆ ಗ್ರಾಮದಲ್ಲಿರುವ ವ್ಯಕ್ತಿಗೆ ಸೇರಿದ ಮನೆಯ ಹತ್ತಿರ ಹೋದಾಗ ಸಮವಸ್ತ್ರದಲ್ಲಿದ್ದ ಅಧಿಕಾರಿಗಳನ್ನು ಹಾಗೂ ಇಲಾಖಾ ವಾಹನವನ್ನು ಕಂಡು ಪರಾರಿಯಾಗಿದ್ದು ಹಿಡಿಯಲು ಪ್ರಯತ್ನಿಸಲಾಗಿ ಕತ್ತಲಾಗಿರುವುದರಿಂದ ಸಿಕ್ಕಿರುವುದಿಲ್ಲ. ನಂತರ ಮನೆಯನ್ನು ಪರಿಶೀಲಿಸಲಾಗಿ ಮನೆಯ ಒಳಭಾಗದ ಹಾಲ್ ನಲ್ಲಿರುವ ಮಂಚದ ಕೆಳಭಾಗದಲ್ಲಿ ಮೂರು ರಟ್ಟಿನ ಪೆಟ್ಟಿಗೆಳಿದ್ದು ಅವುಗಳಲ್ಲಿ ಅಕ್ರಮವಾಗಿ ತಲಾ 90 ಮಿಲಿಯ 190 ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕ್ ಗಳು ಮತ್ತು ತಲಾ 180 ಮಿಲಿಯ 40 ಬ್ಯಾಗ್ ಪೈಪರ್ ಡಿಲಕ್ಸ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕ್ ಗಳು ಇದ್ದು, ಇವುಗಳ ಒಟ್ಟು ಪ್ರಮಾಣ 24.300 ಲೀಟರ್ ಮದ್ಯವನ್ನು ಹೊಂದಿ ಮಾ ರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಆದಕಾರಣ ನೀವು ಅಬಕಾರಿ ಕಾಯ್ದೆ ಕಲಂ 14, 15 ರ

ಉಲ್ಲಂಘನೆ  ಹಾಗೂ ದಂಡನೀಯ ಕಲಂ.32 (1), 38(ಎ) ಮತ್ತು 43 ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರೆಂದು ನಿಮ್ಮ ವಿರುದ್ಧ ಈ ಮೂಲಕ ದೋಷರೋಪಣೆ ಮಾಡಲಾಗಿದೆ.

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು)

( ವೆಂಕಟೇಶಪ್ಪ ವಿ. )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.  ಚನ್ನಪಟ್ಟಣ.

**ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ**

**ಸಿ.ಸಿ. ಸಂಖ್ಯೆ: 339/2024**

ಪಿರ್ಯಾದುದಾರರು - ವಿರುದ್ಧ - ಆರೋಪಿ

ಅಬಕಾರಿ ಪೊಲೀಸರು ಭಾಗ್ಯಮ್ಮ ಉರುಫ್ ಗೌರಮ್ಮ,

ಆರೋಪಿಯ ಹೇಳಿಕೆ

ಪ್ರಶ್ನೆ:1. ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಗಳನ್ನು ಕೇಳಿ ಅರ್ಥಮಾಡಿಕೊಂಡಿರುವಿರಾ?

ಉತ್ತರ:

ಪ್ರಶ್ನೆ:2. ನೀವು ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಚಿಸುವಿರಾ ಅಥವಾ ನ್ಯಾಯಾಲಯದ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರ:

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ದೋಷ ವಾದಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತರು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.)

ದಿನಾಂಕ:

(ವೆಂಕಟೇಶಪ್ಪ ವಿ.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನಪಟ್ಟಣ.